# ಸುತ್ತಾಟ ನನ್ನಿಷ್ಟದ ಹವ್ಯಾಸ



**ಸುಷ್ಮಾ**

ಝೀ ಕನ್ನಡದ 'ಯಾರೇ ನೀನು ಮೋಹಿನಿ'ಯ ಬೆಳ್ಳಿ

★ *ದೀರ್ಘ ವಿರಾಮ ತೆಗೆದುಕೊಂಡಿದ್ದು ಏಕೆ?*

ಬಾಲ್ಯದಿಂದಲೂ ಅದೇ ಕಥೆ. ನಾನು ಒಂದನೇ ತರಗಿತಿಯಲ್ಲಿ ಓದುತ್ತಿದ್ದಾಗಲೇ ಬಣ್ಣ ಹಚ್ಚಿದ್ದೆ. ನನ್ನ ಅಕ್ಕ ಸುಮಾ ಶರತ್ 'ವೆಂಕಟೇಶ ಕಲ್ಯಾಣ' ಧಾರಾವಾಹಿಯಲ್ಲಿ ನಟಿಸುತ್ತಿದ್ದಳು. ತೆಲುಗು– ಕನ್ನಡ ದ್ವಿ ಭಾಷೆಯಲ್ಲಿ ಅದು ಪ್ರಸಾರವಾಗುತ್ತಿತ್ತು. ಚಿತ್ರೀಕರಣ ಸಂದರ್ಭದಲ್ಲಿ ನಾನೂ ಆಕೆ ಜೊತೆ ಹೈದರಾಬಾದ್‌ಗೆ ಹೋಗಿದ್ದೆ. ಆಕೆಯ ತಮ್ಮನ ಪಾತ್ರ ಮಾಡಬೇಕಿದ್ದ ಬೆಂಗಳೂರಿನ ಹುಡುಗ ಬರಲು ಸಾಧ್ಯ ಆಗಲಿಲ್ಲ. ಆಗ ನನಗೆ ಆ ಪಾತ್ರ ಒಲಿದು ಬಂತು. ಅದಾದ ಮೇಲೆ 'ಕುಸುಮಾಂಜಲಿ'ಯಲ್ಲಿ ಬಾಲ ನಟಿಯಾಗಿದ್ದೆ. ಎಂಟನೆ ತರಗತಿ ಓದುವ ಹೊತ್ತಿಗೆ 'ಲಕುಮಿ'ಗೆ ನಾಯಕಿ ನಟಿಯಾದೆ. ಆ ನಂತರ ಓದು ನನ್ನ ಆಯ್ಕೆ ಎಂದು ಅದನ್ನೇ ಮುಂದುವರಿಸಿದೆ. ಎಂಬಿಎಗೆ ಪ್ರವೇಶ ಪರೀಕ್ಷೆ ಬರೆಯುವ ದಿನಾಂಕವನ್ನು ತಪ್ಪಾಗಿ ತಿಳಿದು ಬರೆಯಲು ಸಾಧ್ಯ ಆಗಲಿಲ್ಲ. ಒಂದು ವರ್ಷ ಮನೆಯಲ್ಲಿ ಇರಬೇಕಿತ್ತು. ಸಮಯಕ್ಕೆ ಸರಿಯಾಗಿ ಇಲ್ಲಿ ಅವಕಾಶ ಸಿಕ್ಕಿದೆ, ನಟಿಸುತ್ತಿದ್ದೇನೆ. ಇದನ್ನೇ ವೃತ್ತಿಯಾಗಿ ತೆಗೆದುಕೊಳ್ಳದ ಕಾರಣ ಬಿಡುವು ದೀರ್ಘವಾಗುತ್ತದೆ.

* ಲಕುಮಿ ಹೇಗಿತ್ತು?

ಚಿಕ್ಕ ವಯಸ್ಸಿನಲ್ಲಿಯೇ ಮುಖ್ಯ ಪಾತ್ರ ನಿರ್ವಹಿಸಿದೆ. ಅದು ನನಗೆ ಒಳ್ಳೆಯ ಬ್ರೇಕ್ ಕೊಟ್ಟಿತು. ಅಲ್ಲಲ್ಲಿ ಜನ ಗುರುತಿಸುತ್ತಿದ್ದರು. ಆಗೆಲ್ಲಾ ಜನರು ನನ್ನ ಪಾತ್ರ ನೋಡುತ್ತಿದ್ದಾರೆ. ಚೆನ್ನಾಗಿ ನಟಿಸಬೇಕು ಎನ್ನುವ ಹಂಬಲವನ್ನು ಹೆಚ್ಚಿಸುತ್ತಿತ್ತು. ಇದನ್ನು ಹೊರತಾಗಿ ಯಾವುದೇ ಹೆಚ್ಚುಗಾರಿಕೆಯನ್ನು ಮೂಡಿಸಲಿಲ್ಲ. ಈಗಲೂ, ಆಗಲೂ ಸಾಮಾನ್ಯಳಂತೆಯೇ ಇದ್ದೇನೆ.

★ *ನಟನೆ ವೃತ್ತಿಯಲ್ಲ, ಅಂದರೆ ಏನು ಮಾಡಬೇಕು ಅಂದುಕೊಂಡಿದ್ದೀರಿ?*

ಎಂಬಿಎ ಮಾಡಲೇ ಬೇಕು. ಮೊದಲಿನಿಂದಲೂ ನಾನು ಪ್ರತಿಭಾವಂತ ವಿದ್ಯಾರ್ಥಿನಿ. ಶಿಕ್ಷಣವೇ ನನ್ನ ಆಯ್ಕೆ. ಕಾರ್ಪೊರೇಟ್ ಕಂಪೆನಿಯಲ್ಲಿ ಕೆಲಸ ಮಾಡಬೇಕು. ಅಲ್ಲಿ ತುಂಬಾ ಒತ್ತಡದ ಬದುಕು ಎಂದೆಲ್ಲಾ ಕೇಳಿದ್ದೇನೆ ಅದನ್ನು ಅನುಭವಿಸಬೇಕು. ಈಗಲೇ ಹೋಗಬಹುದು. ಆದರೆ ಸ್ನಾತಕೋತ್ತರ ಪದವಿ ಮಾಡಿಕೊಂಡೇ ಹೋಗಬೇಕು ಎಂದು ನಿರ್ಧರಿಸಿದ್ದೇನೆ. ಮುಂದಿನ ವರ್ಷ ಇಲ್ಲಿ ಎಂಬಿಎ ಸಿಗದಿದ್ದರೆ, ಕೆನಡಾಕ್ಕೆ ಹೋಗಬೇಕು ಎಂದುಕೊಂಡಿದ್ದೇನೆ. ನನ್ನ ಅಕ್ಕ ಭಾವ ಅಲ್ಲಿದ್ದಾರೆ. ಅಲ್ಲಿಯೂ ಮಾಸ್ಟರ್ಸ್ ಮಾಡಲು ಅವಕಾಶ ಇದೆಯಂತೆ. ಯಾವುದಕ್ಕೂ ಮುಂದಿನ ವರ್ಷ ಸಮಯಕ್ಕೆ ಸರಿಯಾಗಿ ಪ್ರವೇಶ ಪರೀಕ್ಷೆಯನ್ನು ಬರೆಯುತ್ತೇನೆ. ಸೀಟ್ ಪಡೆಯುತ್ತೇನೆ. ಅಲ್ಲಿಯ ತನಕ ನಟಿಸುತ್ತೇನೆ. ಮುಂದೆಯೂ ನಟನೆ ಹವ್ಯಾಸವಾಗಿ ಮುಂದುವರಿಯುತ್ತದೆ.

★ *ಬೆಳ್ಳಿ ಹೇಗೆನಿಸುತ್ತಾಳೆ?*

ತುಂಬಾ ಮುಗ್ಧ ಹುಡುಗಿ. ಆಕೆಗೆ ಆಕೆಯ ಮಾವನೇ ಸರ್ವಸ್ವ. ಅವನಿದ್ದರೆ ಪ್ರಪಂಚವೇ ಅವಳ ಕೈಯಲ್ಲಿ ಇದ್ದಂತೆ. ಮಾವ ವಿಧುರನಾಗಿದ್ದಾನೆ. ಪತ್ನಿ ಕಳೆದುಕೊಂಡ ವೇದನೆಯಲ್ಲಿರುವಾಗ 'ಮಾವ ನಾನು ನಿಮ್ಮನ್ನು ಮದುವೆ ಆಗುತ್ತೇನೆ ಚಿಂತಿಸಬೇಡಿ' ಎಂದು ಸಮಾಧಾನ ಮಾಡುತ್ತಾಳೆ ಬೆಳ್ಳಿ. ಆಕೆಯನ್ನು ಮಾವ ಮಗು ರೀತಿಯಲ್ಲೇ ನೋಡುತ್ತಾನೆ. ಆಡಿಸಿ ಬೆಳೆಸಿದ ಮಗು ಸತಿಯಾಗುವುದು ಕಿಂಚಿತ್ತೂ ಇಷ್ಟ ಇಲ್ಲ. ಆದರೆ ಆಕೆಗೆ ಮುದ್ದು ಮಾವನನ್ನೇ ಮದುವೆಯಾಗಬೇಕು ಎನ್ನುವ ಹಟ. ಮಾವನ ವಿಷಯದಲ್ಲಿ ಯಾರು ಏನೇ ಅಂದರೂ ಊಟ– ತಿಂಡಿ ಬಿಟ್ಟು ಮುನಿಸಿಕೊಳ್ಳುವ ಗುಣ ಆಕೆಯದು. ಮುದ್ದು ಮಾವ ಹೊಡೆಯಲಿ, ಬೈಯಲಿ ಅದು ಕ್ಷಣ ಮಾತ್ರವೂ ಮನಸ್ಸಿನಲ್ಲಿ ಉಳಿಯುವುದಿಲ್ಲ. ಅವನಿಗಾಗಿ ಆಕೆ ಏನನ್ನಾದರೂ ಮಾಡಲು ಸಿದ್ಧಳಿದ್ದಾಳೆ.

★ *ನಿಮ್ಮ ಕುಟುಂಬದ ಹಿನ್ನೆಲೆ.. ಬೆಂಬಲ ಹೇಗಿದೆ?*

ಅಪ್ಪ ಶೇಖರ್ ಬಿಇಎಲ್‌ನಲ್ಲಿ ಕೆಲಸ ಮಾಡುತ್ತಾರೆ. ಅಮ್ಮ ಭಾಗೀರತಿ ಗೃಹಿಣಿ. ಮನೆಯವರಿಂದ ಯಾವುದೇ ನಿರ್ಬಂಧ ಇಲ್ಲ. ಅವರ ಪ್ರೋತ್ಸಾಹ ಇರುವುದರಿಂದಲೇ ನಟಿಸಲು ಸಾಧ್ಯವಾಗಿದೆ. ಓದುವ ವಿಷಯದಲ್ಲಿಯೂ ಅವರು ಏನನ್ನೂ ಹೇಳುವುದಿಲ್ಲ. ಹುಟ್ಟಿ ಬೆಳೆದಿದ್ದು ಬೆಂಗಳೂರಿನಲ್ಲಿಯೇ.

★ *ನಿಮ್ಮ ಹವ್ಯಾಸಗಳು ಏನು?*

ಶಾಪಿಂಗ್ ಕ್ರೇಜ್ ಕಡಿಮೆ. ಸುತ್ತಾಡುವುದು ಇಷ್ಟದ ಕೆಲಸ. ಬಿಡುವು ಇದ್ದಾಗ ಸುತ್ತುತ್ತೇನೆ. ಓದುತ್ತೇನೆ. ಇಷ್ಟ ಪಟ್ಟು ಶೂ... ಕನ್ನಡಕ.. ಟೋಪಿಗಳನ್ನು ಖರೀದಿ ಮಾಡುತ್ತೇನೆ. ಹ್ಯಾರಿ ಪಾಟರ್ ಕಾದಂಬರಿಗಳು ಇಷ್ಟ. ಸದ್ಯ ಬೈರಪ್ಪನವರ ಪರ್ವ ಓದುತ್ತಿದ್ದೇನೆ. ಬಿಡುವು ಸಿಕ್ಕಾಗೆಲ್ಲ ಸ್ನೇಹಿತರ ಜೊತೆ ಸುತ್ತಾಡುತ್ತೇನೆ. ಯಾವುದೇ ನಿರ್ದಿಷ್ಟ ಕೆಲಸ ಇಲ್ಲದೆಯೂ ಸ್ಕೂಟರ್ ಓಡಿಸಿಕೊಂಡು ಹೋಗುತ್ತೇನೆ. ಅಥವಾ ಸಿನಿಮಾ ನೋಡುತ್ತೇನೆ. ಸಂಗೀತ ಆಲಿಸುವುದೂ ನನ್ನ ಆಸಕ್ತಿ.

■ ರಾಘವೇಂದ್ರ